# ಸುದ್ದಿ ಸಂಚಯ

## ಶ್ರೀಲಂಕಾದಲ್ಲಿ ಸುನಾಮಿಯಿಂದಾದ ವಿಪತ್ತಿನ ನಿರ್ವಹಣೆ

**ಭಾರತ ಸರ್ಕಾರದ ಟೆಲಿಕಾಂ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು ಸೇವೆಸಲ್ಲಿಸಿ ಇದೀಗ ನಿವೃತ್ತರಾದ ಮೈಸೂರಿನ ರಾಮಕೃಷ್ಣ ಆಶ್ರಮದ ಜ್ಞಾನವಾಹಿನಿ ಮುಂತಾದ ಅನೇಕ ಬೃಹತ್ ಯೋಜನೆಗಳಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿರುವ ಶ್ರೀಯುತ ಎನ್.ಎಸ್ ಚಕ್ರವರ್ತಿಯವರನ್ನು ಶ್ರೀಲಂಕದ ವಿಪತ್ತಿನ ನಿರ್ವಹಣೆಯ ಸಲಹೆಗಾರರನ್ನಾಗಿ ಜಿನೀವಾದ ಅಂತಾರಾಷ್ಟ್ರೀಯ ವಿಪತ್ತಿನ ನಿರ್ವಹಣಾ ಸಂಸ್ಥೆಯು ನೇಮಿಸಿದೆ. ಶ್ರೀಯುತರು ಶ್ರೀಲಂಕಾಕ್ಕೆ ಭೇಟಿಯಿತ್ತು ಅಲ್ಲಿ ವಿಪತ್ತಿನ ನಿರ್ವಹಣಾ ಕಾರ್ಯದ ಒಂದು ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.**

೨೬ನೇ ಡಿಸೆಂಬರ್ ೨೦೦೪ರಂದು ಇಂಡೋನೇಷಿಯಾ ಸಾಗರ ದಡಿಯ ಭೂಕಂಪ ಸುನಾಮಿ ಎಂಬ ಭೀಕರವಾದ ರಕ್ಕಸ ಅಲೆಗಳನ್ನುಂಟುಮಾಡಿ ಊಹಿಸಲಾರದಷ್ಟು ದೂರದಲ್ಲಿರುವ ಪೂರ್ವ ಆಫ್ರಿಕ, ತಾನ್‌ಜಾನಿಯ ಮತ್ತು ಕೆನ್ಯಾದವರೆಗೆ ಸಾವಿರಾರು ಕಿ. ಮೀ. ಸಂಚರಿಸಿ ಸುಮಾರು ೨,೨೦,೦೦೦ ಜನರನ್ನು ಬಲಿತೆಗೆದುಕೊಂಡಿರುವುದು ಈಗ ಇತಿಹಾಸವಾಗಿದೆ. ಅತ್ಯಂತ ಭೀಕರವಾದ ದುರಂತಗಳನ್ನು ಎದುರಿಸಿದ ದೇಶಗಳೆಂದರೆ ಇಂಡೋನಿಷಿಯಾ, ಶ್ರೀಲಂಕಾ ಮತ್ತು ಭಾರತ.

ಇಂಡೋನೇಷ್ಯಾದ ಸಾಗರತಳದಲ್ಲಿ ಆದ ಭೂಕಂಪನದಿಂದ ಎದ್ದ ಅಲೆಗಳು ಗಂಟೆಗೆ ೭೦೦ ಕಿ.ಮೀ. ವೇಗದಲ್ಲಿ ಧಾವಿಸುತ್ತ ಅತ್ತ ಥೈಲೆಂಡಿನಿಂದ ಇತ್ತ ಶ್ರೀಲಂಕಾದವರೆಗೆ ತನ್ನ ಕೆನ್ನಾಲಗೆಯನ್ನು ಚಾಚುತ್ತ ಧಾವಿಸಿತು. ಶ್ರೀಲಂಕಾದಲ್ಲಿ ಎದ್ದ ಸುನಾಮಿ ಅಲೆಗಳ ಎತ್ತರ ೧೨ ಮೀಟರ್ ಮುಟ್ಟಿತ್ತು. ಎಲ್ಲಿ ನೋಡಿದರಲ್ಲಿ ಮೃತ ದೇಹ ಗಳು, ಬುಡಮೇಲಾದ ವಾಹನಗಳು, ಕಟ್ಟಡಗಳ ಅವಶೇಷಗಳು, ಧ್ವಂಸಗೊಂಡ ಮನೆಗಳು. ಪರಿಣಾಮವಾಗಿ ಮಾಯವಾದ ಕುಡಿಯುವ ನೀರಿನ ವ್ಯವಸ್ಥೆ, ಕತ್ತಲೆ ತುಂಬಿದ ಹಳ್ಳಿಗಳು, ಪ್ರಾಕೃತಿಕ ವಿಕೋಪ ದಿಂದ ದಿಕ್ಕೆಟ್ಟವರ ರೋದನ, ಆಕ್ರಂದನ, ನರಳಾಟ, ಅಶಾಂತತೆ, ದುಃಖ, ಅನಿಶ್ಚಿತತೆಯಿಂದ ದಿನ ಕಳೆಯುತ್ತಿರುವ ಇವರ ಬದುಕನ್ನು ಭರಿಸಿಕೊಡಲು ಸರಕಾರ, ಸ್ವಯಂಸೇವಾಸಂಸ್ಥೆಗಳು ಸಹಕರಿಸುತ್ತಿವೆ. ಪುನಶ್ಚೇತನಕ್ಕೆ ವರ್ಷಗಳೇ ಬೇಕಾಗಬಹುದು.

ಸಮುದ್ರತೀರದ ಸುಮಾರು ಒಂದು ಕಿಲೋಮೀಟರ್ ಪ್ರದೇಶ ದಲ್ಲಿದ್ದ ನೈಸರ್ಗಿಕ ಹಾಗೂ ಮನುಷ್ಯನಿರ್ಮಿತ ಸಂಪತ್ತೆಲ್ಲವೂ ಧ್ವಂಸ ವಾಗಿದೆ. ಎರಡು ಘಂಟೆಗಳ ದಾಳಿಯಲ್ಲಿ ಶ್ರೀಲಂಕಾದ ಸುಮಾರು ೩೦,೦೦೦ ಜನರನ್ನು ಆಹುತಿ ತೆಗೆದುಕೊಂಡು, ೯೦೦ ಸಾವಿರ ಜನರನ್ನು ಪರಿಹಾರ ಶಿಬಿರಗಳಿಗೆ ತಳ್ಳಿದೆ. ಇನ್ನೂ ೬೦೦೦ ಜನ ಕಾಣೆಯಾಗಿದ್ದಾರೆ. ಸುಮಾರು ೮೮,೦೨೨ ಮನೆಗಳು ಧ್ವಂಸಗೊಂಡು ೨೫೬೩೬ ಮನೆಗಳು ತೀವ್ರ ಹಾನಿಗೊಳಗಾಗಿವೆ. ೨೦೦ ಶಾಲೆಗಳದ್ದೂ ಇದೇ ಕಥೆ. ಶ್ರೀಲಂಕಾದ ಸೆಂಟ್ರಲ್ ಬ್ಯಾಂಕ್ ಪ್ರಕಾರ ಇದರಿಂದಾದ ನಷ್ಟ ೧೫೦೦ ಬಿಲಿಯನ್ ಕೋಟಿಗಳು. ೫೫೦ ಬಿಲಿಯನ್ ರೂಗಳು ಬರೀ ರಸ್ತೆ ಮುಂತಾದವುಗಳ ಸೌಲಭ್ಯಗಳ ಪುನರ್ನಿರ್ಮಾಣಕ್ಕೆ ಬೇಕಾಗುವುದು.

ಅಪಾರ ಜೀವರಾಶಿಯ ಮಾರಣ ಹೋಮ ಮಾಡಿ ನಮ್ಮ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿದ ಈ ದುರಂತದ ಅತ್ಯಂತ ಭೀಕರ ಹಾಗೂ ದೀರ್ಘ ಪರಿಣಾಮ ಪರಿಸರದ ಮೇಲೆ. ಸುಂದರ ತಾಣಗಳಾಗಿದ್ದ ಬೀಚ್‌ಗಳು ಈಗ ಸ್ಮಶಾನಭೂಮಿಗಳಾಗಿವೆ. ಪರಿಸರವನ್ನು ಕಲುಷಿತಗೊಳಿಸುವ ಸಮುದ್ರ ದಾಳದ ಎಲ್ಲ ಕಸವೂ ತೀರದಲ್ಲಿ ರಾಶಿರಾಶಿಯಾಗಿ ಬಿದ್ದಿದೆ. ಪರಿಸರ ಸಂರಕ್ಷಣಾ ವಿಜ್ಞಾನಿಗಳಿಗೆ ಇದು ದೊಡ್ಡ ಸವಾಲಾಗಿದೆ.

ಸಮುದ್ರ ತೀರದಿಂದ ೧೦೦ ಮೀಟರುಗಳವರೆಗೆ ಜನವಸತಿ ಇಲ್ಲದಂತೆ ಮಾಡಲು ಈಗ ಶ್ರೀಲಂಕಾದ ಸರ್ಕಾರ ಸಮುದ್ರತೀರ ಸಂರಕ್ಷಣೆಯ ಕಾಯ್ದೆಯನ್ನು ತರುವ ಯೋಚನೆ ಮಾಡುತ್ತಿದೆ. ಆದರೆ ಸಮುದ್ರವನ್ನೇ ನಂಬಿ ಜೀವನ ಸಾಗಿಸುತ್ತಿರುವ ಮೀನುಗಾರರು, ತಮ್ಮ ಸಾಂಪ್ರದಾಯಿಕ ನೆಲೆಗಳನ್ನು ಖಾಲಿಮಾಡಲು ಒಪ್ಪದೆ ಸಮುದ್ರಕ್ಕೆ ಹತ್ತಿರವಿರಲು ಬಯಸುತ್ತಾರೆ. ಸಮುದ್ರದುಬ್ಬರ ತಗಲುವ ೧ ಕಿ.ಮೀ. ದೂರದಲ್ಲಿ ಯಾವುದೇ ಕಟ್ಟಡವನ್ನು ನಿರ್ಮಿಸ ಬೇಕಾದರೂ ನಗರಾಭಿವೃದ್ಧಿಯ ಪೂರ್ವಾನುಮತಿ ಅಗತ್ಯ.

ಶ್ರೀಲಂಕಾ ಸರಕಾರಕ್ಕೆ ವಿಶ್ವದ ಎಲ್ಲೆಡೆಯಿಂದ ಸಹಾಯ ಹಸ್ತ ದೊರೆತಿದೆ. ದೇಶಗಳೂ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳೂ ಪರಿಹಾರಕಾರ್ಯದಲ್ಲಿ ಕೈಜೋಡಿಸಿವೆ. ಸುನಾಮಿಯ ದಾಳಿಯಿಂದ ತತ್ತರಿಸಿದ ಭಾರತ, ತನಗೇ ಸಂಪನ್ಮೂಲಗಳ ಅಗತ್ಯವಿದ್ದರೂ, ಶ್ರೀಲಂಕಾದ ಪರಿಹಾರ ಕಾರ್ಯಕ್ಕಾಗಿ ಮೊದಲು ಹೊರಟ ದೇಶ ಗಳಲ್ಲಿ ಒಂದಾಗಿದೆ. ಅನೇಕ ಸ್ವಯಂಸೇವಾ ಸಂಸ್ಥೆಗಳು, ವಿದೇಶಿ ಸರ್ಕಾರಗಳು, ರಾಮಕೃಷ್ಣ ಮಿಷನ್, ವಿಶ್ವಸಂಸ್ಥೆ ಸೇರಿದಂತೆ ಅಂತಾ ರಾಷ್ಟ್ರೀಯ ಸ್ವಯಂಸೇವಾಸಂಸ್ಥೆಗಳು ಪರಿಹಾರ ಕಾರ್ಯದಲ್ಲಿ ತೀವ್ರ ವಾಗಿ ತೊಡಗಿವೆ. ಮನೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸು ವುದರಲ್ಲಿ ಈಗ ಕೆಲಸ ನಡೆಯಬೇಕಾಗಿದೆ. ಕುಟುಂಬಗಳಲ್ಲಿನ ಹೆಂಗಸರು, ಮಕ್ಕಳು ಆ ಭೀಕರ ದುರಂತದ ಅನುಭವದಿಂದ ತೀವ್ರ ಮಾನಸಿಕ ಆಘಾತಕ್ಕೆ ಒಳಗಾಗಿದ್ದಾರೆ. ಈ ಆಘಾತದಿಂದ ಚೇತರಿಸಿ ಕೊಳ್ಳಲು ನೆರವಾಗಲು ಸಲಹಾಕೇಂದ್ರಗಳು ಕಾರ್ಯನಿರತವಾಗಿವೆ.

ಸರ್ಕಾರವು ಸುನಾಮಿ ಪರಿಹಾರ ನಿಧಿ ಸಮಿತಿಯೊಂದನ್ನು ರಚಿಸಿದೆ. UNICEFಪ್ರಕಾರ ೯೦೦೦ (ಸತ್ತಿರುವರಲ್ಲಿ ಶೇ. ೩೦ರಷ್ಟು) ಮಕ್ಕಳು ಬಲಿಯಾಗಿದ್ದಾರೆ ಹಾಗೂ ೩೦೦೦ ಮಕ್ಕಳು ಕಾಣೆಯಾಗಿದ್ದಾರೆ. ಶಾಲೆ ಹಾಗೂ ಗ್ರಂಥಾಲಯಗಳೆಲ್ಲ, ಸುನಾಮಿಯ ಅಲೆಗಳಲ್ಲಿ ಕೊಚ್ಚಿಹೋಗಿರುವುದರಿಂದ ಮಕ್ಕಳ ಶಿಕ್ಷಣ ಅಸ್ತವ್ಯಸ್ತಗೊಂಡಿದೆ. ಅನೇಕ ಅಮೂಲ್ಯವಾದ ಗ್ರಂಥಗಳೂ ನೀರು ಪಾಲಾಗಿವೆ.

ವಿಪತ್ತಿನ ನಿರ್ವಹಣೆಗಾಗಿ IMF(ಐ.ಎಂ.ಎಫ್.) ೧೫೦ ಬಿಲಿಯನ್ ರೂಪಾಯಿಗಳ ಆರ್ಥಿಕ ಸಹಾಯವನ್ನು ನೀಡಲು ಒಪ್ಪಿದೆ. ೧೦ ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರ ನೀಡಿದೆ. ಪರಿಹಾರ ನಿಧಿಗಾಗಿ ಬಂದಿರುವ ಅತ್ಯಂತ ದೊಡ್ಡ ಮೊತ್ತ ಭಾರತದ್ದೇ. ಶ್ರೀಲಂಕಾದಲ್ಲಿರುವ ಭಾರತದ ವಿದೇಶಾಂಗ ಕಾರ್ಯಭಾರಿಯು ಬಹಳ ಆಸಕ್ತಿ ವಹಿಸಿದೆ. ಸುಮಾರು ೪೦ಕ್ಕೂ ಹೆಚ್ಚು ದೇಶಗಳು ಪರಿಹಾರ ಕಾರ್ಯಕರ್ತರನ್ನು ಹಾಗೂ ಆರ್ಥಿಕ ಮತ್ತು ಇತರೆ ನೆರವನ್ನು ಒದಗಿಸಿವೆ.

### ರಾಮಕೃಷ್ಣ ಮಿಷನ್ನಿನಿಂದ ಶ್ರೀಲಂಕಾದಲ್ಲಿ ಪರಿಹಾರ ಕಾರ್ಯ

ವಿಪತ್ತಿನ ಸುದ್ದಿ ತಲುಪಿದಕೂಡಲೆ ರಾಮಕೃಷ್ಣ ಮಿಷನ್ ಕ್ಷಿಪ್ರ ಗತಿಯಲ್ಲಿ ಮೊದಲನೆ ದಿನದಿಂದಲೇ ಬೃಹತ್ ಪ್ರಮಾಣದಲ್ಲಿ

ಪರಿಹಾರ ಕಾರ್ಯಾಚರಣೆಯನ್ನು ಕೈಗೊಂಡಿತು. ಕೊಲಂಬೋದ ಮಿಷನ್ ಕೇಂದ್ರವು ಬಟ್ಟಿಕಲೋವ, ಎಚ್ಚಲಮ್‌ಪಟ್ಟು, ಟ್ರಿಂಕಾಮಲೀ, ಮುಲ್ಲಾಯ್‌ಟಿವು ಪ್ರದೇಶಗಳಲ್ಲಿ ಆಹಾರ, ವಸ್ತ್ರ, ಪಾತ್ರೆ, ದೈನಂದಿನ ಬಳಕೆಯ ಸಾಮಗ್ರಿ ಹಾಗೂ ಔಷಧಿಗಳನ್ನು ವಿತರಿಸಿತು. ಸಂತ್ರಸ್ತರಿಗೆ ಪ್ರತಿನಿತ್ಯ ಊಟದ ವ್ಯವಸ್ಥೆ ಮಾಡಿ ಸೇವಾಕಾರ್ಯ ಮುಂದುವರೆಸಿತು. ತೀವ್ರವಾಗಿ ಹಾನಿಗೊಳಗಾಗಿರುವ ಅಂಪಾರ ಮತ್ತು ಬಟ್ಟಿಕಲೋವ ಜಿಲ್ಲೆಗಳಲ್ಲಿ ರಾಮಕೃಷ್ಣ ಮಿಷನ್ ಬೃಹತ್ ಪರಿಹಾರ ಕಾರ್ಯಾಚರಣೆಯನ್ನು ಮುಂದುವರೆಸುತ್ತಿದೆ. ಶ್ರೀಲಂಕಾ ಸರ್ಕಾರದ ಕೋರಿಕೆಯ ಮೇರೆಗೆ ಸರ್ಕಾರ ನೀಡಿರುವ ನಕ್ಷೆಯಂತೆ ೧೫೦ ಶಾಶ್ವತ ಮನೆಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊತ್ತಿದೆ. ಸರ್ಕಾರವು ಮೂರು ಹಂತಗಳಲ್ಲಿ ಶಾಶ್ವತ ಮನೆಗಳನ್ನು ನೀಡುವ ಯೋಜನೆಯನ್ನು ರೂಪಿಸಿಕೊಂಡಿದೆ: ಯಾವುದೇ ಆಶ್ರಯವಿಲ್ಲದವರಿಗೆ ತುರ್ತುಮನೆಗಳು, ೨-೩ ವರ್ಷಗಳಾದರೂ ವಾಸಿಸಬಹುದಾದ ತಾತ್ಕಾಲಿಕ ಮನೆಗಳು ಹಾಗೂ ಮುರಿದಿರುವ ಮನೆಗಳನ್ನು ಪುನರ್ನಿರ್ಮಿಸುವುದು. ಕೆಲವು ಪೂರ್ವಪ್ರಾಂತಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲದಾಗಿದೆ. ದೊಡ್ಡ ತೊಂದರೆಯೆಂದರೆ ಅಲ್ಲಿಗೆ ತಲುಪುವ ರಸ್ತೆಗಳೇ ನಾಶವಾಗಿವೆ. ಸರಿಯಾದ ಪ್ರಮಾಣದ ನೀರಿನ ಪೂರೈಕೆ ಮುಂತಾದುವುಗಳಿಗೆ ಸಾಕಷ್ಟು ಸಮಯ ಬೇಕಾಗುವುದು.

ಸುನಾಮಿ ಯಾವುದೋ ಒಂದು ದೇಶಕ್ಕೆ ಅಪ್ಪಳಿಸಲಿಲ್ಲ. ಅದು ಭೂಗೋಳದ ಕಾಲು ಭಾಗ ಪ್ರದೇಶಕ್ಕೆ ಅಪ್ಪಳಿಸಿತು. ಅರ್ಧ ಏಷ್ಯಾ ಖಂಡವನ್ನು ತಲ್ಲಣಿಸುವಂತೆ ಮಾಡಿದ ಸುನಾಮಿ, ಪ್ರಕೃತಿ ವಿಕೋಪಗಳಿಗೆ ಗಡಿಗಳಿಲ್ಲ ಎಂಬ ಸಂದೇಶವನ್ನು ಸಾರಿದೆ. ಇತಿಹಾಸದುದ್ದಕ್ಕೂ ಪ್ರಾಕೃತಿಕ ವಿಕೋಪಗಳು ಮಾನವರಿಗೆ ಕೊನೆಯಿಲ್ಲದ ದುಃಖವನ್ನು ತಂದಿವೆ. ತಾಂತ್ರಿಕ ಮತ್ತು ಗಣಕ ವಿಜ್ಞಾನಗಳಲ್ಲಿನ ಅದ್ಭುತ ಪ್ರಗತಿಯನ್ನು ನಮ್ಮ ನಾಗರಿಕತೆಯನ್ನು ಇಂತಹ ದುರಂತಗಳು ಅಣಕಿಸುತ್ತವೆ.

ಆದರೆ ದುರಂತಕ್ಕೆ ವಿಶ್ವದ ಜನತೆ ಸ್ಪಂದಿಸಿದ ರೀತಿ ನೋಡಿದರೆ ಮನುಷ್ಯ ಎಂಥ ಪ್ರಕೋಪವನ್ನಾದರೂ ಎದುರಿಸಬಲ್ಲ ಎಂಬುದು ಸ್ಪಷ್ಟವಾಗಿದೆ. ಇತಿಹಾಸದುದ್ದಕ್ಕೂ ಭಾರತದ ನಿಲುವಾದ **ವಸುಧೈವ ಕುಟುಂಬಕಮ್** ಎಂಬುದು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ವಿಶೇಷ ಮಹತ್ವ ಪಡೆದಿದೆ. ಜಗತ್ತಿನ ಎಲ್ಲೆಡೆ ಇರುವ ಮನುಷ್ಯರು ತಾವು ದ್ವೀಪಗಳಲ್ಲ. ಬದಲಾಗಿ ಇತರೆ ಮನುಷ್ಯರೊಂದಿಗೆ ಸಂಬಂಧ ಹೊಂದಿರುವವರು ಎಂಬ ಅರಿವನ್ನು ಮೂಡಿಸಲು ಜಾಗತೀಕರಣ ಸಮರ್ಥವಾಗಬೇಕು. ಇತರರಿಂದ ದೂರವಾಗಿ ಒಂಟಿಯಾಗಿ ಬದುಕುವುದು ಸಾಧ್ಯವಿಲ್ಲ ಎಂಬ ಪಾಠವನ್ನು ಇತ್ತೀಚಿಗಿನ ಈ ದುರಂತ ಮನದಟ್ಟು ಮಾಡಿಸಿದೆ. ಸಾಮೂಹಿಕ ಸಾವಿನ ಸಂದರ್ಭದಲ್ಲಿ ತೋರುವ ಒಗ್ಗಟ್ಟು ಬದುಕಿರುವಾಗ ವ್ಯಕ್ತವಾದಲ್ಲಿ ಬದುಕಿನಲ್ಲಿ ಹೆಚ್ಚು ಸಾಮರಸ್ಯತೆಯೂ ಮಾನವೀಯತೆಯೂ ನೆಲೆಸಬಲ್ಲದು.

## ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿ 'ಧರ್ಮಸಮನ್ವಯ' ಸಂಗ್ರಹಾಲಯ

ವಿವಿಧ ಧರ್ಮಗಳ ನಡುವಿನ ಉದಾತ್ತ ಹಾಗೂ ಸೌಹಾರ್ದಯುತ ಭಾವನೆಯನ್ನೇ ವಿಷಯವಸ್ತುವಾಗಿ ಉಳ್ಳ ವಿಶಿಷ್ಟವಾದ ಒಂದು ಸಂಗ್ರಹಾಲಯವೇ 'ಧರ್ಮ ಸಮನ್ವಯ'. ಈ ಸಂಗ್ರಹಾಲಯವು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಸೇರಿದ ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿದೆ.

ಈ ಸಂಗ್ರಹಾಲಯವು ೧೯೭೪ರಲ್ಲಿ ಸಂಸ್ಥೆ ಪ್ರಾರಂಭವಾದಂದಿನಿಂದಲೂ ಇದೆ. ಮೂವತ್ತು ವರ್ಷಗಳ ನಂತರ ಈ ಸಂಗ್ರಹಾಲಯವನ್ನು ಇದೀಗ ಸಂಪೂರ್ಣ ನವೀಕರಿಸಿ ಆಕರ್ಷಕವಾದ ಹೊಸ ಭಿತ್ತಿಚಿತ್ರಗಳನ್ನು ಹೆಚ್ಚಿನ ಮಾಹಿತಿಯನ್ನು ಸೇರಿಸಲಾಗಿದೆ. ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಆರ್ಥಿಕ ನೆರವಿನಿಂದ ಹಾಗೂ ಭಕ್ತಜನರ ನಿಃಸ್ವಾರ್ಥ ಸೇವೆಯಿಂದ ಈ ಸಂಗ್ರಹಾಲಯದ ನವೀಕರಣ ಸಾಧ್ಯವಾಗಿದೆ. ನವೀಕರಣಗೊಂಡ ಈ ಸಂಗ್ರಹಾಲಯದ ಉದ್ಘಾಟನೆಯನ್ನು ಮಾರ್ಚ್ ೨೮ರಂದು ಇತಿಹಾಸದ ಪ್ರಾದೇಶಿಕ ಸಂಗ್ರಾಲಯದ ವಿಜ್ಞಾನಿಯಾಗಿರುವ ಡಾ.ಎಸ್. ಸೇತುರಾಮಲಿಂಗಮ್ ನೆರವೇರಿಸಿದರು.



ವಸ್ತುಸಂಗ್ರಹಾಲಯದಲ್ಲಿರುವ ಒಂದು ಪ್ರತಿಕೃತಿ

ಸಂಗ್ರಹಾಲಯದ ಪ್ರವೇಶದ್ವಾರದಲ್ಲಿಯೇ ವಿಶಿಷ್ಟವಾದ ಒಂದು ತೈಲ ವರ್ಣಚಿತ್ರವಿದೆ. ಶ್ರೀರಾಮಕೃಷ್ಣರ ಜೀವಿತಾವಧಿಯಲ್ಲೇ ಪ್ರದರ್ಶಿತವಾಗಿದ್ದ ಈ ಚಿತ್ರದ ಪ್ರತಿಯಲ್ಲಿ, ಮುಂಬರುವ ದಿನಗಳಲ್ಲಿ ಧರ್ಮಸಮನ್ವಯದ ಆದರ್ಶದಿಂದ ಪ್ರೇರಿತಗೊಂಡು ವಿಭಿನ್ನ ಧರ್ಮಗಳು ಹೇಗೆ ಒಗ್ಗೂಡುತ್ತವೆ ಹಾಗೂ ಮತಗಳ ಮಧ್ಯೆ ವೈಷಮ್ಯಗಳು ತೊಡೆದುಹೋಗಿ, ಸೌಹಾರ್ದತೆ ಸಾಧಿಸಲ್ಪಡುತ್ತದೆ ಎಂಬುದನ್ನು ಶ್ರೀರಾಮಕೃಷ್ಣರು ಭಕ್ತ ಕೇಶವಚಂದ್ರಸೇನನಿಗೆ ತೋರಿಸುತ್ತಿದ್ದಾರೆ.

ಸಂಗ್ರಹಾಲಯದಲ್ಲಿ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮ, ಕ್ರೈಸ್ತಮತ, ಇಸ್ಲಾಂಧರ್ಮ—ಈ ಧರ್ಮಗಳ ಕುರಿತು ಅತ್ಯಾವಶ್ಯಕವಾದ ಮಾಹಿತಿಯುಳ್ಳ ಭಿತ್ತಿ ಫಲಕಗಳಿವೆ. ಅಷ್ಟೇ ಅಲ್ಲದೆ ಹಿಂದೂ ಧರ್ಮದ ವಿವಿಧ ಮಜಲುಗಳು, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಚಟುವಟಿಕೆಗಳು ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತ ವಿಸ್ತೃತವಾದ ವಿಭಾಗಗಳಿವೆ.

## ಮೈಸೂರು ರೈಲ್ವೇ ನಿಲ್ದಾಣದಲ್ಲಿ ಶ್ರೀರಾಮಕೃಷ್ಣ ವಿವೇಕಾನಂದ ವೇದಾಂತ ಸಾಹಿತ್ಯದ ಮಾರಾಟ ಕೇಂದ್ರ.

ಇಡೀ ಕರ್ನಾಟಕದಲ್ಲಿಯೇ ಮೊಟ್ಟಮೊದಲ ಬಾರಿಗೆ ರೈಲ್ವೇ ನಿಲ್ದಾಣದಲ್ಲಿ ರಾಮಕೃಷ್ಣ ಮಹಾಸಂಘದ ಧಾರ್ಮಿಕ ಸಾಹಿತ್ಯದ ಮಾರಾಟ ಕೇಂದ್ರವೊಂದನ್ನು ಹೊಂದಿದ ಹೆಗ್ಗಳಿಕೆಗೆ ಮೈಸೂರು ರೈಲ್ವೇ ನಿಲ್ದಾಣ ಪಾತ್ರವಾಗಿದೆ. ಇದರ ಉದ್ಘಾಟನೆಯನ್ನು ಮೈಸೂರು ರೈಲ್ವೇ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಉಷಾ ಮಾಥುರ್ ಅವರು ೦೩.೦೪.೨೦೦೫ರಂದು ನೆರವೇರಿಸಿದರು. ಕಳೆದ ಮೂರು ವರ್ಷಗಳ ಅವಿರತ ಪ್ರಯತ್ನದ ಫಲವಾಗಿ ಈ ಮಾರಾಟ ಕೇಂದ್ರದ ಕನಸು ಈಗ ಸಾಕಾರಗೊಂಡಿದೆ ಎಂದು ಅವರು ಹರ್ಷಿಸಿದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಅವರು ಜನತೆ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕರೆಯಿತ್ತರು. ಆಶ್ರಮದ ಸಾಧು ಬ್ರಹ್ಮಚಾರಿಗಳು, ರೈಲ್ವೇ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಭಕ್ತರು ಇದರಲ್ಲಿ ಪಾಲ್ಗೊಂಡಿದ್ದರು.